ಯೋಗ ಶಿಕ್ಷಣವನ್ನು ಶಾಲ ಪಠ್ಯಪುಸ್ತಕದಲ್ಲಿ ಅಳವಡಿಸುವುದು.

3298 -ಶ್ರೀ ಎಸ್. ಪ್ರಭಾಕರ ರಾಣೆ (ಕಾರವಾರ) : ಮಾನ್ಯ ಶಿಕ್ಷಣ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಪ್ರೌಢಶಾಲಾ ಶಿಕ್ಷಣದಿಂದ ಶಾಲಾಪಠ್ಯ ಕ್ರಮದಲ್ಲಿ ಯೋಗ ಶಿಕ್ಷಣ ಅಳವಡಿಸುವುದು ಯಾರ ಹಂತದಲ್ಲಿದೆ.*
2. *ಎಷ್ಟು ಜನ ದೈಹಿಕ ಶಿಕ್ಷಕರಿಗೆ ಆದರ ತರಭೇತಿ ನೀಡಲಾಗಿದೆ.*
3. *ಇಲ್ಲದಿದ್ದರೆ ತರಬೇತಿ ನೀಡಲು ವಿಳಂಬ ವೇಕೆ ಮಾಡಲಾಗಿದೆ.*
4. *ಅನಾವಶ್ಯಕ ವೆಚ್ಚ ಕಡಿಮೆ ಮಾಡಿ ಹಂತವಾಗಿ ದೈಹಿಕ ಶಿಕ್ಷಕರಿಗೆ ತರಭೇತಿ ನೀಡಲು ಯಾಕೆ ಕ್ರಮ ತೆಗೆದುಕೊಳ್ಳಬಾರದು.*
5. *ಈ ವರ್ಷದಲ್ಲಿ ಈ ಯೋಜನೆ ಜಾರಿ ಮಾಡಲು ಸಾಧ್ಯವೇ?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು)

1. ಪರಿಶೀಲನೆಯಲ್ಲಿದೆ.

2. ಉದ್ಭವಿಸುವುದಿಲ್ಲ.

3. ಈ ಬಗ್ಗೆ ತರಭೇತಿ ನೀಡಲು ಒಂದು ಸಮನ್ವಯ ಸಮಿತಿ ರಚಿಸಿದೆ. ಈ ಸಮಿತಿಯುವರದಿಯಂತೆ ದೈಹಿಕ ಶಿಕ್ಷಣ ಶಿಕ್ಷಕರಿಗೆ ತರಬೇತಿ ನೀಡಲುತಗಲುವ ವೆಚ್ಚಕ್ಕಾಗಿ ಹಣ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು ಸರ್ಕಾರವು ಪರಿಶೀಲಿಸುತ್ತಿವೆ

4. ಪರಿಶೀಲಿಸಲಾಗುವುದು

5. ಪರಿಶೀಲಿಸಲಾಗುವುದು.

ಕಾಪುಕ್ಷೇತ್ರದ ಪಡುಬೆಳಿಯಲ್ಲಿ ವಿದ್ಯುತ್ ಪವರ್ ಸ್ಟೇಷನ್ ನಿರ್ಮಾಣ

3307 - ಶ್ರೀ ವಸಂತ ಸಾಲಿಯಾನ್ (ಕಾಪು) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಾಪು ಕ್ಷೇತ್ರದ ಪಡುಬೆಳಿಯಲ್ಲಿ ಕರ್ನಾಟಕ ವಿದ್ಯುತ್ ಮಂಡಳಿ ಸ್ಥಾಪಿಸಲು ಉದ್ದೇಶಿಸಿದ ಫವರ್ ಸ್ಟೇಷನ್, ನ ಕಾರ್ಯ ಯಾವ ಹಂತದಲ್ಲಿದೆ?

ಆ) ಆದರ ವಿಳಂಬಕ್ಕೆ ಕಾರಣವೇನು?

ಇ) ಆ ಕುರಿತು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಕಾಪು ಕ್ಷೇತ್ರದ ಪಡುಬೆಳಿ ಎಂಬ ಸ್ಥಳದಲ್ಲಿ ವಿದ್ಯುತ್‌ಉಪ ಕೇಂದ್ರದ ನಿರ್ಮಾಣದ ಪ್ರಸ್ತಾವನೆಯು ಸದ್ಯಕ್ಕಿರುವುದಿಲ್ಲ.

ಆ) 'ಅ' ಉಪ ಪ್ರಶ್ನೆಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ದ.ಕನ್ನಡ ಜಿಲ್ಲೆಯಲ್ಲಿ ಆಂಗ್ಲ ಭಾಷೆಯ ಶಾಲೆಗಳ ಬಗ್ಗೆ

3447 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನ ಇಂಗ್ಲೀಷ್ ಮಾಧ್ಯಮ ಶಾಲೆಗಳ ಪ್ರಾರಂಭಕ್ಕೆ ಅನುಮತಿ ಕೋರಿ ಸರ್ಕಾರಕ್ಕೆ ಎಷ್ಟು ಅರ್ಜಿಗಳು ಬಂದಿವೆ: